**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ. ಎಂ. ಎಫ್.ಸಿ., ನ್ಯಾಯಾಲಯ ಚನ್ನಪಟ್ಟಣ ಚನ್ನಪಟ್ಟಣ.**

**ಸಿ.ಸಿ. ಸಂಖ್ಯೆ: 257/2019**

ಚಾಸಾ: 2 ಪ್ರಾಸಾ:1

| | | |
|---|---|---|
| ಹೆಸರು | : | ಕೆ ಹೆಚ್ ರಮೇಶ್ |
| ಗಂಡನ/ತಂದೆಯ ಹೆಸರು | : | ಲೇಟ್ ಹುಚ್ಚಯ್ಯ |
| ವಯಸ್ಸು | : | 61 ವರ್ಷ |
| ಉದ್ಯೋಗ | : | ನಿವೃತ್ತ ಅಬಕಾರಿ ಮುಖ್ಯಪೇದೆ |
| ವಾಸ | : | ರಾಮನಗರ |

**ದಿನಾಂಕ 16.03.2026 ರಂದು ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ಯವರಿಂದ:**

ನಾನು 2015 ರಿಂದ 2025 ಮಾರ್ಚ್ ರವರೆಗೆ ಅಬಕಾರಿ ಮುಖ್ಯಪೇದೆಯಾಗಿ ಚನ್ನಪಟ್ಟಣ ವಲಯದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ

ದಿನಾಂಕ 14.04.2021 ರಂದು ಮಧ್ಯಾಹ್ನ 3.00 ಗಂಟೆಯ ಸಮಯದಲ್ಲಿ ಚಾಸಾ1 ರವರು 2019 ರ ಲೋಕಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಅಬಕಾರಿ ಅಕ್ರಮಗಳನ್ನು ತಡೆಗಟ್ಟುವ ಸಲುವಾಗಿ ಚನ್ನಪಟ್ಟಣ ತಾಲ್ಲೂಕು, ಸಿಂಗರಾಜಿ ಪುರ ರಸ್ತೆಯಲ್ಲಿ ಸರ್ಕಾರಿ ವಾಹನದಲ್ಲಿ ರಸ್ತೆ ಕಾವಲು ಮಾಡುತ್ತಿದ್ದಾಗ ಸಿಂಗರಾಜಿಪುರದಿಂದ ಭೂಹಳ್ಳಿಗೆ ಹೋಗುವ ರಸ್ತೆಯಲ್ಲಿ ಒಬ್ಬ ಆಸಾಮಿ ಟಿ ವಿ ಎಸ್ ಎಕ್ಸ್ ಎಲ್ ವಾಹನದ ಪೆಟ್ರೋಲ್‌ಟ್ಯಾಂಕ್ ಮೇಲೆ ಒಂದು ರಟ್ಟಿನ ಪೆಟ್ಟಿಗಯನ್ನು ಇಟ್ಟುಕೊಂಡಿದ್ದು ಆತನನ್ನು ವಾಹನ ನಿಲ್ಲಿಸುವಂತೆ ಸೂಚನೆ ನೀಡಿದ ಮೇರೆಗೆ ಸಮವಸ್ತ್ರದಲ್ಲಿದ್ದ ಅಧಿಕಾರಿಗಳನ್ನು ನೋಡಿ ದ್ವಿಚಕ್ರ ವಾಹನ ಮತ್ತು ಪ್ಲಾಸ್ಟಿಕ್ ಚೀಲವನ್ನು ಬಿಟ್ಟು ಪರಾರಿ ಆಗಿರುತ್ತಾರೆ. ಚಾಸಾ-3 ಮತ್ತು 4 ರವರನ್ನು ಬರಮಾಡಿಕೊಂಡು ವಿಚಾರವನ್ನು ತಿಳಿಸಿ, ನಮ್ಮ ಜೊತೆ ಪಂಚರಾಗಿ ಸಹಕರಿಸಬೇಕೆಂದು ಕೇಳಿಕೊಂಡ ಮೇರೆಗೆ ಮದ್ಯ ತುಂಬಿದ ಪೆಟ್ಟಿಗೆ ಪರೀಶೀಲನೆ ಮಾಡಲು ಮಾನ್ಯ ನ್ಯಾಯಾಲಯದಿಂದ ಶೋಧನಾ ವರದಿಯನ್ನು ಪಡೆಯಲು ಕಾಲಾವಕಾಶ ಇಲ್ಲದ ಕಾರಣ ಕರ್ನಾಟಕ ಅಬಕಾರಿ ಕಲಂ 54 ರ ರೀತ್ಯಾ

ಕಾರಣಗಳನ್ನು ನಮೂದಿಸಿ ಸ್ಥಳದಲ್ಲಿ ಶೋದನಾ ವಾರೆಂಟ್ ಅನ್ನು ತಯಾರಿಸಿ, ರಟ್ಟಿನ ಪೆಟ್ಟಿಗೆಯನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ Haywards cheers whisky 90 ಎಂ ಎಲ್ ನ 96 ಪೌಚ್ ಗಳು ಇರುವುದು ಕಂಡು ಬಂದಿರುತ್ತದೆ. ಅಂದರೆ 8.640 ಲೀಟರ್ ಮದ್ಯಇರುತ್ತದೆ. ದೊರೆತ ಮದ್ಯದ ದಾಸ್ತಾನುವಿನಿಂದ 90 ಮಿಲಿಯ 30 Haywards cheers whisky ಟೆಟ್ರಾ ಪ್ಯಾಕ್ ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಮಾದರಿ ತೆಗೆದು ಬಿಳಿಯ ಬಟ್ಟೆಯಿಂದ ಸುತ್ತಿ ದಾರವನ್ನು ಕಟ್ಟಿ, ಅರಗು ಹಚ್ಚಿ ಇಲಾಖಾ ಸೀಲು ನಮೂದಿಸಿ ಸೀಲು ಮಾಡಲಾಯಿತು. ಪ್ರಕರಣದ ವಿವರವನ್ನು ಬರೆದ ಚೀಟಿಗಳನ್ನು ಇವುಗಳಿಗೆ ಅಂಟಿಸಲಾಯಿತು. ನಂತರ ಮಾದರಿ ಸೀಲಿನ ನಕಲನ್ನು ತಯಾರಿಸಿ ಮತ್ತು ಪ್ರಕರಣದ ವಿವರವನ್ನು ಬರೆದು ಪಂಚರ ಸಹಿಯನ್ನು ಪಡೆಯಲಾಯಿತು. ಸದರಿ ಮಹಜರ್ ಅನ್ನು ಮಧ್ಯಾಹ್ನ 3.00-4.00 ಗಂಟೆಯವರೆಗೆ ಜರುಗಿಸಲಾಯಿತು. ಸಾಕ್ಷಿಯು ಮಹಜರ್ ಅನ್ನು ನೋಡಿ ಗುರುತಿಸಿದುದ ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ 1(ಎ) ಎಂದು ಗುರುತಿಸಲಾಯಿತು.ವಾಹನವನ್ನು ಪರಿಶೀಲಿಸಲಾಗಿ ಅದು ಕೆ ಎ 04-ಹೆಚ್ ಎಫ್ 1650 ಟಿ ವಿ ಎಸ್ ಸೂಪರ್ ಎಕ್ಸ್ ಎಲ್ ಹೆವಿ ಡ್ಯೂಟಿಯಾಗಿರುತ್ತದೆ. ನಂತರ ದೊರೆತ ಮದ್ಯ ಮತ್ತು ಟಿವಿಎಸ್ ಅನ್ನು ಮುಂದಿನ ಕ್ರಮಕ್ಕಾಗಿ ಇಲಾಖಾ ವಶಕ್ಕೆ ಪಡೆಯಲಾಯಿತು. ಆ ದಿನ ಅಮಾನತ್ತು ಪಡಿಸಿಕೊಂಡ ಮದ್ಯದ ಪೌಚ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದು ಈಗ ನ್ಯಾಯಾಲಯದ ಮುಂದೆ ಇದ್ದು ಸದರಿ 30 ಟೆಟ್ರಾ ಪ್ಯಾಕೆಟ್ ಗಳನ್ನು ಮುದ್ದೆ ಮಾಲು 1 ಎಂದು ಗುರುತಿಸಲಾಯಿತು. ಆ ದಿನ ಅಮಾನತ್ತು ಪಡಿಸಿಕೊಂಡ ಕೆ ಎ 04-ಹೆಚ್ ಎಫ್ 1650 ಟಿ ವಿ ಎಸ್ ಸೂಪರ್ ಎಕ್ಸ್ ಎಲ್ ಹೆವಿ ಡ್ಯೂಟಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

ದಿಃ16.08.2019 ರಂದು ಚಾಸಾ- 7ರವರಿಗೆ ಪ್ರಕರಣದ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದು ಇದೇ ವ್ಯಕ್ತಿ ಸದರಿ ದಿನ ಓಡಿ ಹೋದ ವ್ಯಕ್ತಿಯಾಗಿರುತ್ತಾರೆ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರ ಸಿ ಎಲ್ ಎಸ್ ವಕೀಲರಿಂದಃ**

ಚುನಾವಣಾ ಕರ್ತವ್ಯಕ್ಕೆ ನನ್ನನ್ನು ನೇಮಿಸಿದ ಬಗ್ಗೆ ಆದೇಶದ ಪ್ರತಿಯನ್ನು ನೀಡಿಲ್ಲ. ಘಟನಾ ಸ್ಥಳ ವೃತ್ತದಿಂದ ಕೂಡಿದೆ ಎಂದರೆ ನಿಜ. ಘಟನಾ ಸ್ಥಳದಲ್ಲಿ

ಸಾಕಷ್ಟು ಸಾರ್ವಜನಿಕರು ಸೇರುತ್ತಾರೆಂದರೆ ನಿಜ. ನಮ್ಮ ಠಾಣಾ ಅಂಕಿಅಂಶಗಳಿಗೋಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು. ಆರೋಪಿಯನ್ನು ತಡೆದಾಗ ಸಾರ್ವಜನಿಕರು ಇದ್ದರು. ಮು ಮಾ 1 ರ ಮೇಲೆ ಸಾಕ್ಷಿದಾರರ ಸಹಿಯನ್ನು ಸೃಷ್ಟಿ ಮಾಡಿರುತ್ತೇವೆಂದರೆ ಸುಳ್ಳು. ಮು ಮಾ 1 ರ ಮೇಲೆ ಇರುವ ಸಹಿಗೂ ಮತ್ತು ಮಹಜರ್ ನಲ್ಲಿರುವ ಸಾಕ್ಷಿದಾರರ ಸಹಿಗೂ ವ್ಯತ್ಯಾಸವಿದೆ ಎಂದರೆ ಸುಳ್ಳು. ನಾನು ಆರೋಪಿಯನ್ನು ತಡೆದಿಲ್ಲ ಮತ್ತು ಪ್ರಕರಣದ ಅನುಕೂಲತೆಗಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸುಳ್ಳು.ಆರೊಪಿಯ ವಶದಿಂದ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸುಳ್ಳು. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎಂದರೆ ಸುಳ್ಳು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**